ಅ) ಚನ್ನಪಟ್ಟಣ ನಗರ ಹಾಗೂ ತಾಲ್ಲೂಕಿನಲ್ಲಿ ಪ್ರತಿ ದಿನ ಅಗ್ನಿ ಅನಾಹುತಗಳು ಹೆಚ್ಚುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದಲ್ಲಿ ಅಲ್ಲಿ ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ ? ಅದನ್ನು ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಸರ್ಕಾರದ ಗಮನಕ್ಕೆ ಬಂದಿದೆ. ಇದೆ 1990–91 ನೇ ಆರ್ಥಿಕ ಸಾಲಿನಲ್ಲಿ ಚನ್ನಪಟ್ಟಣ ಹಾಗೂ ರಾಮನಗರಗಳ ನಡುವೆ ಒಂದು ಅಗ್ನಿ ಶಾಮಕ ಠಾಣೆಯನು ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :– ರಾಜ್ಯದಲ್ಲಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 817 (1001)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳು ಎಷ್ಟು ?

ಆ) ಒಟ್ಟು ಮಂಜೂರಾದ ಅಕ್ಕಿ ಗಿರಣಿಗಳ ಮತ್ತು ಎಣ್ಣೆ ಗಿರಣಿಗಳ ಲೈಸೆನ್ಸ್‌ಗಳು ಎಷ್ಟು ?

ಇ) ಸರ್ಕಾರದ ವತಿಯಿಂದ ಹೊಸದಾಗಿ ಅಕ್ಕಿ ಮತ್ತು ಎಣ್ಣೆ ಗಿರಣಿಗಳಿಗೆ ಲೈಸೆನ್ಸ್ ನೀಡಲಾಗುತ್ತಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಅಕ್ಕಿ ಗಿರಣಿಗಳು 10829, ಎಣ್ಣೆ ಗಿರಣಿಗಳು 372

ಆ) ಅಕ್ಕಿ ಗಿರಣಿಗಳು 10924, ಎಣ್ಣೆ ಗಿರಣಿಗಳು 372.

ಇ) ಹೌದು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಜಾರಿಯಲ್ಲಿರುವ ಕಾನೂನು ರೀತಿಯಂತೆ ಪರವಾನಿಗೆಗಳನ್ನು ನೀಡುವ ಅಧಿಕಾರ ಉಳ್ಳವರಾಗಿದ್ದಾರೆ.

ಅಧ್ಯಕ್ಷರು :– ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಗಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2) ನೇ ಪರಿಚ್ಛೇದದ ಮೇರೆಗೆ ಭಾರತ ನಿಯಂತ್ರಕ ಹಾಗೂ ಮಹಾಲೇಖಾಪಾಲಕರವರ 31 ನೇ ಮಾರ್ಚ್ 1988ರ ವರೆಗಿನ ಹಣ ವಿನಿಯೋಗ, ವಿತ್ತೀಯ ಲೆಕ್ಕಪತ್ರಗಳ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

2) ಶ್ರೀ ಧರ್ಮಸಿಂಗ್ (ಗೃಹ ಮಂತ್ರಿ) :– ಮಾನ್ಯ ಅಧ್ಯಕ್ಷರೆ, 1952ನೇ ಇಸವಿಯ ವಿಚಾರಣಾ ಆಯೋಗದ ಶಾಸನದ 3 (4) ನೇ ಕಲಮಿನ ಮೇರೆಗೆ–

ಅ) ಚಿಂಚೋಳಿಯಲ್ಲಿ ನಡೆದ ಅಶ್ರುವಾಯು ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು, ಹಾಗೂ

ಆ) ಬೀದರ್‌ನಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

3) ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಹಾಗೂ ನಾಗರೀಕ ಸರಬರಾಜು ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರ ಹೆಸರಿನಲ್ಲಿರತಕ್ಕಂಥ 1963 ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯದ 38 (3) ನೇ ಕಲಮಿನ ಮೇರೆಗೆ–